**[Govt. of Karnataka** **C.R.P. 67]**

| Deposition Sheets (RP.No.57) Form No.4 |
|---|

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 1374/2019**

ಪಿ.ಡಬ್ಲು ಃ 6 ಸಿ.ಡಬ್ಲು ಃ 8

ಸಾಕ್ಷಿದಾರನ ಹೆಸರು ಃ ವಿಠಲ ರಾಯ ಹೆಗ್ಡೆ
ತಂದೆಯ ಹೆಸರು ಃ ಲಕ್ಷ್ಮಣ ಹೆಗ್ಡೆ
ಪ್ರಾಯ ಃ 70 ವರ್ಷ
ಉದ್ಯೋಗ ಃ ವ್ಯಾಪಾರ
ವಾಸ ಃ ಕಾರ್ಕಳ

ದಿನಾಂಕ 24-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಆರೋಪಿ ಪರಿಚಯವಿರುದಿಲ್ಲ.

ನಾನು ಕಾರ್ಕಳ ತಾಲೂಕು, ಕಸಬಾ ಗ್ರಾಮದ, ಕಾರ್ಲ ಕಾಂಪ್ಲೆಕ್ಸ್ ಕಟ್ಟಡದಲ್ಲಿ ವಿಜಯಾ ವೈನ್ಸ್ ಎಂಬ ಹೆಸರಿನ ಮಧ್ಯದ ಅಂಗಡಿ ನಡೆಸುತ್ತಿದ್ದೇನೆ. ನನ್ನ ವೈನ್ ಶಾಪ್ ಬದಿಯ ಅಂಗಡಿ ಕೋಣೆಯಲ್ಲಿ ಹರೀಶ್ ಶೆಟ್ಟಿ ಎಂಬುವವರು ಹೋಟೇಲ್ ವ್ಯವಹಾರ ಮಾಡುತ್ತಿಲಿಲ್ಲ. ಹರೀಶ್ ಶೆಟ್ಟಿ ಎಂಬುವವರು ತಮ್ಮ ಸ್ವಂತ ಲಾಭಕ್ಕೋಸ್ಕರ ಯಾವುದೇ ಪರವಾನಿಗೆ ಇಲ್ಲದೇ ಹೋಟೇಲ್ ನಲ್ಲಿ ಅಕ್ರಮವಾಗಿ ಮಧ್ಯವನ್ನು ದಾಸ್ತಾನು ಇಟ್ಟಿರುವುದಿಲ್ಲ. ಸದ್ರಿ ಹರೀಶ್ ಶೆಟ್ಟಿ ಹೋಟೇಲ್ ಗೆ ಬರುತಿದ್ದ ಗ್ರಾಹಕರಿಗೆ ಮಧ್ಯವನ್ನು ಅಕ್ರಮವಾಗಿ ಊಟದೊಂದಿಗೆ ಸರಬರಾಜು ಮಾಡುತ್ತಿರಲಿಲ್ಲ. ದಿಃ 23-02-2019 ರಂದು ಪೋಲಿಸರು ಹರೀಶ್ ಶೆಟ್ಟಿ ನಡೆಸುತ್ತಿದ್ದ ಹೋಟೇಲ್ ಮೇಲೆ ದಾಳಿ ಮಾಡಿರುವುದಿಲ್ಲ. ಅಲ್ಲದೇ ಯಾವುದೇ ಮಧ್ಯ ತುಂಬಿದ ಬಾಟಲಿಗಳನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ. ಘಟನೆ ಕುರಿತು ನಾನು ಪೋಲಿಸರಿಗೆ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ-1 ರಿಂದ ಮು.ಮಾ-44 ನ್ನು ನೋಡಿ ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರು:-

ನನ್ನ ವೈನ್ ಶಾಪ್ ಬದಿಯ ಅಂಗಡಿ ಕೋಣೆಯಲ್ಲಿ ಹರೀಶ್ ಶೆಟ್ಟಿ ಎಂಬುವವರು ಹೋಟೇಲ್ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಹರೀಶ್ ಶೆಟ್ಟಿ ಎಂಬುವವರು ತಮ್ಮ ಸ್ವಂತ ಲಾಭಕ್ಕೋಸ್ಕರ ಯಾವುದೇ ಪರವಾನಿಗೆ ಇಲ್ಲದೇ ಹೋಟೇಲ್ ನಲ್ಲಿ ಅಕ್ರಮವಾಗಿ ಮಧ್ಯವನ್ನು ದಾಸ್ತಾನು ಇಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಹರೀಶ್ ಶೆಟ್ಟಿ ಹೋಟೇಲ್ ಗೆ ಬರುತಿದ್ದ ಗ್ರಾಹಕರಿಗೆ ಮಧ್ಯವನ್ನು ಅಕ್ರಮವಾಗಿ ಊಟದೊಂದಿಗೆ ಸರಬರಾಜು ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಿಃ 23-02-2019 ರಂದು ಪೋಲಿಸರು ಹರೀಶ್ ಶೆಟ್ಟಿ ನಡೆಸುತ್ತಿದ್ದ ಹೋಟೇಲ್ ಮೇಲೆ ದಾಳಿ ಮಾಡಿ, ಮಧ್ಯ ತುಂಬಿದ ಬಾಟಲಿಗಳನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮು.ಮಾ-1 ರಿಂದ ಮು.ಮಾ-44 ನನ್ನ ವೈನ್ ಶಾಪ್ ಗೆ ಸರಬರಾಜು ಆದ ಮಧ್ಯದ ಬಾಟಲಿಗಳು ಎಂದರೆ ಸರಿಯಲ್ಲ. ಘಟನೆ ಕುರಿತು ನಾನು ಪೋಲಿಸರಿಗೆ ದಿಃ 11-04-2019 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿತರ ಪರ : ಶ್ರೀ ಬಿ.ಎಮ್.ಎಸ್ ವಕೀಲರಿಂದ :ಃ ಏನು ಇಲ್ಲ.

ಮರುವಿಚಾರಣೆ :ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ